1. **ಘನತ್ಯಾಜ್ಯ ನಿರ್ವಹಣೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ನಾಗೇಂದ್ರ ರವರು ಮಾತನಾಡಿ ಬಿ.ಟಿ.ಎಂ 2ನೇ ಹಂತದ ವ್ಯಾಪ್ತಿಯಲ್ಲಿರುವ ವಿವಿಧ ರಸ್ತೆಗಳ ಮೂಲೆಗಳಲ್ಲಿ ಸಮರ್ಪಕವಾಗಿ ಎಲೆಗಳ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸಲು Composting unit ಗಳನ್ನು ಅಳವಡಿಸಲು ಲಾಲ್‌ಬಾಗ್ ನಲ್ಲಿ ತಜ್ಞರನ್ನು ಬೇಟಿ ಮಾಡಿ ಸಲಹೆಯನ್ನು ಪಡೆಯಬಹುದಾಗಿರುತ್ತದೆ ಎಂದು ತಿಳಿಸಿದರು.

ಈ ಬಗ್ಗೆ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಈಗಾಗಲೇ ಐ.ಎ.ಸ್ ಅಧಿಕಾರಿಗಳ ಬಡಾವಣೆಯಲ್ಲಿ ಪಾಲಿಕೆ ವತಿಯಿಂದ Composting unit ಗಳನ್ನು ಅಳವಡಿಸಲಾಗಿದ್ದು ಮತ್ತೊಮ್ಮೆ ತಜ್ಞರನ್ನು ಬೇಟಿ ಮಾಡಿ ಸಲಹೆ ಪಡೆಯುವುದಾಗಿ ತಿಳಿಸಿದರು ಹಾಗೂ ಈಗಾಗಲೇ ಮಡಿವಾಳ ಕೆರೆಯಲ್ಲಿ ಶ್ರೇಡ್ಡರ್ ಯಂತ್ರವನ್ನು ಅಳವಡಿಸಿದ್ದು ಸೂಕ್ತ ನಿರ್ವಹಣೆ ಇಲ್ಲದೆ ಹಾಳಗಿದ್ದು ಅದನ್ನು ಸರಿಪಡಿಸುವಂತೆ ಕೋರಿದರು.

ಈ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡಿ 15ನೇ ಹಣಕಾಸು ಯೋಜನೆಯಲ್ಲಿ ಅನುದಾನವನ್ನು ಮೀಸಲಿರಿಸಿದ್ದು ಶೀಘ್ರದಲ್ಲೇ ಸೂಕ್ತ ನಿರ್ವಹಣೆಯೊಂದಿಗೆ ಕ್ರಮವಹಿಸುವುದಾಗಿ ತಿಳಿಸಿದರು.

ಶ್ರೀ ನಾಗೇಂದ್ರ ರವರು ಮಾತನಾಡಿ ಬಿ.ಟಿ.ಎಂ 2ನೇ ಹಂತದ ವ್ಯಾಪ್ತಿಯಲ್ಲಿರುವ 29ನೇ ಮುಖ್ಯರಸ್ತೆ ಮತ್ತು 31ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸವಿದ್ದು ಮತ್ತು ಕಸಕ್ಕೆ ಬೆಂಕಿ ಹಾಕುತ್ತಿದ್ದು ಸೂಕ್ತ ಕ್ರಮ ವಹಿಸುವಂತೆ & ಬ್ಲಾಕ್‌ಸ್ಪಾಟ್ ಗಳಿಗೆ ಮಾರ್ಷಲ್‌ಗಳನ್ನು ನಿಯೋಜಿಸುವಂತೆಯು ಹಾಗೂ ಪ್ರತಿನಿತ್ಯ ಕಸ ಎತ್ತುವ ಆಟೋಗಳಿಗೆ ಮೈಕ್‌ಗಳನ್ನು ಅಳವಡಿಸಿ ಸಾರ್ವಜನಿಕರಲ್ಲಿ ಹಸಿಕಸ ಮತ್ತು ಒಣಕಸವನ್ನು ಬೇರ್ಪಡಿಸುವಂತೆ ಅರಿವು ಮೂಡಿಸುವ ಬಗ್ಗೆ ಕೋರಿದರು.

**ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಕೂಡಲೇ ಕ್ರಮವಹಿಸುವುದಾಗಿ ತಿಳಿಸಿದರು.**

ಶ್ರೀ ನಾರಯಾಣ ರವರು ಮಾತನಾಡಿ ಬಿ.ಟಿ.ಎಂ 2ನೇ ಹಂತದ ವ್ಯಾಪ್ತಿಯಲ್ಲಿರುವ 36ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸವಿದ್ದು ತೆರವುಗೊಳಿಸಿ ಪಾದಚಾರಿ ಮಾರ್ಗವನ್ನು ಸ್ವಚ್ಛವಾಗಿ ಇಡುವಂತೆ ಕೋರಿದರು.

**ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಕೂಡಲೇ ಕ್ರಮವಹಿಸುವುದಾಗಿ ತಿಳಿಸಿದರು.**

2. **ಅರಣ್ಯ ಇಲಾಖೆಯ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀಮತಿ ಚೈತ್ರ ನಾಗರೀಕರು ರವರು ಮಾತನಾಡಿ ಸೂಕ್ತ ಅನುಮತಿಯನ್ನು ಪಡೆದು ಮರಗಳನ್ನು ಮತ್ತು ಮರದ ಕೊಂಬೆಗಳನ್ನು ತೆರವುಗೊಳಿಸಬೇಕೆಂದು ಅಗ್ರಹಿಸಿದರು ಹಾಗೂ ಕತ್ತರಿಸಿದ ಮರದ ಕೊಂಬೆಗಳನ್ನು ತೆರವುಗೂಳಿಸಲು ಕೋರಿದರು.

ಈ ಬಗ್ಗೆ ಸಂಬಂದಿಸಿದ ಅರಣ್ಯ ಇಲಾಖೆರವರಿಗೆ ತಿಳಿಸುವುದಾಗಿ ಕಾರ್ಯದರ್ಶಿರವರು ತಿಳಿಸಿದರು.

3. **ಕಂದಾಯ ಇಲಾಖೆ ಬಗ್ಗೆ.**

ಸಭೆಗೆ ಹಾಜರಿದ್ದ ಶ್ರೀ ನಾರಯಣ ರವರು ಮಾತನಾಡಿ ತೆರಿಗೆಯನ್ನು ಪಾಲಿಕೆಯು ಹೆಚ್ಚಳ ಮಾಡಿದ್ದು ಇದರ ಬದಲಾಗಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳಲ್ಲಿ ನಿಲ್ಲಿಸುವ ವಾಹನಗಳಿಂದ ಸುಂಕವನ್ನು ವಸೂಲಿ ಮಾಡುವಂತೆಯು ಹಾಗೂ ಸಮರ್ಪಕವಾಗಿ ನಿಗದಿತ ಸಮಯದಲ್ಲಿ ತೆರಿಗೆ ಪಾವತಿಸುವವರಿಗೆ ವಿನಾಯಿತಿ ನೀಡುವಂತೆ ಸಲಹೆ ನೀಡಿದರು.

ಈ ಬಗ್ಗೆ ಮಾನ್ಯ ಅಧ್ಯಕ್ಷರು ಮಾತನಾಡಿ ತಮ್ಮ ಸಲಹೆಯನ್ನು ಮೇಲಾಧಿಕಾರಿಗಳ ಸಭೆಯಲ್ಲಿ ಚರ್ಚಿಸುವುದಾಗಿ ತಿಳಿಸಿದರು ಹಾಗೂ ಪಾಲಿಕೆಯ ಅಂತರ್ಜಾಲದಲ್ಲಿ ನಿಗದಿತ ಸಮಯದಲ್ಲಿ ತೆರಿಗೆ ಪಾವತಿಸುವವರ ವಿವರಗಳನ್ನು ನೋಡಬಹುದಾಗಿರುತ್ತದೆ ಎಂದು ತಿಳಿಸಿದರು.

4. **ಯೋಜನೆ ವಿಭಾಗ (ಉದ್ಯಾನವನ ಮತ್ತು ಆಟದ ಮೈದಾನಗಳು)**

ಸಭೆಗೆ ಹಾಜರಿದ್ದ ಶ್ರೀ ನಾಗೇಂದ್ರ ರವರು ಮಾತನಾಡಿ ಕೆಂಪೆಗೌಡ ಆಟದ ಮೈದಾನದಲ್ಲಿ ಸ್ಕೇಟಿಂಗ್ ಆಡುವ ಜಾಗವನ್ನು ಖಾಸಗಿ ರವರು ಅತಿಕ್ರಮಿಸಿ ಸ್ಥಳಿಯ ನಾಗರೀಕರಿಗೆ ಆಟವಾಡಲು ಅವಕಾಶ ನೀಡದೆ ಮೈದಾನದ ದ್ವಾರವನ್ನು ಮುಚ್ಚುತ್ತಿರುತ್ತಾರೆ ಈ ಬಗ್ಗೆ ಪರಿಶೀಲಿಸಿ ಸ್ಥಳಿಯ ನಾಗರೀಕರಿಗೆ ಮೊದಲ ಆಧ್ಯತೆ ನೀಡಲು ಕೋರಿದರು.

**ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಯೋಜನೆ ವಿಭಾಗ (ಉದ್ಯಾನವನ ಮತ್ತು ಆಟದ ಮೈದಾನಗಳು)**



Scanned with CamScanner

